ಗ್ರಾಮದಲ್ಲೂ ಕೂಡ 2.5ಕಿಂತಲೂ ಹೆಚ್ಚಿಗೆ ಇದೆಯೆಂಬ ವರದಿ ಬಂದಿದೆ. ಇದಕ್ಕೆ ಶುದ್ಧೀಕರಣ ಯಂತ್ರಗಳನ್ನಳವಡಿಸುವುದೊಂದೇ ಮಾರ್ಗ. ಅದನ್ನು ಹಂತಹಂತವಾಗಿ ಅಳವಡಿಸುತ್ತೇವೆ.

(ಓ) ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಕರ್ನಾಟಕ ದರ್ಶನ ಕಾರ್ಯಕ್ರಮದಲ್ಲಿ ಆಗಿರುವ ಗೊಂದಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಅಂಕೋಲ) :— ನಿನ್ನೆ, ಮೊನ್ನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ದರ್ಶನಕೊಸ್ಕರ ಅಲ್ಲಿಯ ರೈತರನ್ನು ಕರೆದುಕೊಂಡು ಹೋಗಲು ಕೃಷಿ ಇಲಾಖೆ ಯೋಜಿಸಿತ್ತು. ಅದರಂತೆ, 1250 ರೂಗಳನ್ನು ರೈತರು ಕೊಡುವುದು, ಉಳಿದ 1250 ರೂ.ಗಳನ್ನು ಇಲಾಖೆಯು ಭರಿಸುವುದೆಂದೂ ಹೇಳಲಾಗಿತ್ತು. ಇವತ್ತು ಬೆಳಿಗ್ಗೆ ನನ್ನ ಕ್ಷೇತ್ರದಿಂದ ನನಗೆ ಫೋನ್ ಮಾಡಿ ವಿಷಯ ತಿಳಿಸಿದ ಮೇರೆಗೆ, ನಿನ್ನೆ ಅಲ್ಲಿ ಸಾಕಷ್ಟು ಗೊಂದಲ, ಅವ್ಯವಸ್ಥೆಗಳಾಗಿ, ಸರಿಯಾದ ಬಸ್ ನೀಡದೆ ಗೊಂದಲಗಳಾಗಿರುವುದರಿಂದ ಯಾರು ನೀಜವಾಗಿ ಹಣವನ್ನು ಕೊಟ್ಟಿದ್ದಾರೆಯೋ, ಅವರು ಕರ್ನಾಟಕ ದರ್ಶನಕ್ಕೆ ಹೋಗಲಿಲ್ಲ. ಅದನ್ನು ಬಿಟ್ಟು ಇಲಾಖೆಯವರು ಸಿಕ್ಕಿದವರನ್ನು ಕರೆದುಕೊಂಡು ಹೋಗಿದ್ದಾರೆ. ಈ ರೀತಿ ಕರ್ನಾಟಕ ದರ್ಶನದಂತಹ ಕಾರ್ಯಕ್ರಮದಲ್ಲಿ ಆಯ್ಕೆಯಾದ ರೈತರಿಗೆ ಯೋಗ್ಯವಾದ ವ್ಯವಸ್ಥೆಯನ್ನು ಅಲ್ಲಿಯ ಅಧಿಕಾರಿಗಳು ಮಾಡುವುದನ್ನು ಬಿಟ್ಟು, ಅವರನ್ನು ಅತ್ಯಂತ ಕೀಳಾಗಿ ಕಂಡು, ಅವರಿಗೆ ಕನಿಷ್ಠ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟಿಲ್ಲ. ಈ ರೀತಿಯ ಅವ್ಯವಸ್ಥೆ, ಗೊಂದಲಗಳಿಂದಾಗಿ ಅಲ್ಲಿಯ ರೈತರು ಬೇಸತ್ತು ನನಗೆ ಫೋನ್ ಮಾಡಿದ್ದರು. ಇವರು ನಡೆಸುವುದೇ ಒಂದೆರಡು ಕಾರ್ಯಕ್ರಮಗಳು. ಅದನ್ನೂ ಈ ರೀತಿ ನಡೆಸಿದರೆ, ಅಲ್ಲಿ ಈ ರೀತಿಯಾದರೆ, ಕೃಷಿ ಇಲಾಖೆಯಲ್ಲಿ ಹೇಗೆ ನಂಬಿಕೆಯನ್ನಿಡುವುದು ಎಂದು ಬಹಳ ಆಕ್ರೋಶಭರಿತರಾಗಿದ್ದಾರೆ. ಕಾಟಾಚಾರಕ್ಕೆ ಕರ್ನಾಟಕ ದರ್ಶನ ಮಾಡಿಸಬೇಕೆಂದು ಯಾರ್ಯಾರನ್ನೋ ಕೆರದುಕೊಂಡು ಹೋಗಿದ್ದಾರೆ. ಈ ರೀತಿಯ ಗೊಂದಲವನ್ನು ಸರಿಪಡಿಸುವಂತೆ ನಾನು ತಮ್ಮ ಮೂಲಕ ಕೃಷಿ ಸಚಿವರನ್ನು ಆಗ್ರಹಪಡಿಸುತ್ತೇನೆ. ನಿಜವಾಗಿ ಹಣ ಕೊಟ್ಟವರಿಗೆ ಯೋಗ್ಯ ವ್ಯವಸ್ಥೆ ಮಾಡಿ, ಕರ್ನಾಚಕ ದರ್ಶನಕ್ಕೆ ವ್ಯವಸ್ಥೆ ಮಾಡಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ನಾನೂ ಸಹ ಇಂದಿನ ಬೆಳಿಗ್ಗೆಯ ಪತ್ರಿಕೆಗಳಲ್ಲಿ ಓದಿದ್ದು, ಅದರ ಆದಾರದ ಮೇಲೆ ಹೇಳುವುದಾದರೆ, ಇವರು ಸೂಪರ್ ಲಕ್ಸುರಿ, ಡೀಲಕ್ಸ್ ಬಸ್ಸೆಂದು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ.

ಡೀಲಕ್ಸ್ ಮತ್ತು ಸೂಪರ್ ಲಕ್ಸುರಿಯಲ್ಲಿ ಹೋಗಬೇಕಾದರೆ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಆದರೆ, ನನ್ನ ಅಂದಾಜಿನಲ್ಲಿ ಸಾಮಾನ್ಯ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ತೆಗೆದುಕೊಂಡು ಹೋಗಿ ಅಲ್ಲಿ ನಿಲ್ಲಿಸಿರಬಹುದು. ಇವರ ವಿವರಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದೊಂದು ನನ್ನ ಕನಸಿನ ಕಾರ್ಯಕ್ರಮ. ಭಾರತ ಮತ್ತು ಕರ್ನಾಟಕ ದರ್ಶನವನ್ನು ನಮ್ಮ ರೈತರಿಗೆ ಮಾಡಿಸಬೇಕು, ಎಲ್ಲೆಲ್ಲಿ ಉತ್ತಮವಾದ ಕೆಲಸ ನಡೆಯುತ್ತಿದೆ ಅದರ ಲಾಭವನ್ನು ನಮ್ಮ ರೈತರು ಪಡೆಯಬೇಕೆನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮಗಳನ್ನು ರೂಪಿಸಿರುವುದು. ಆದರೆ, ಇವರ ಅನುಭವವನ್ನು ನಾನು ಇಲ್ಲಿ ಹಂಚಿಕೊಳ್ಳಲು ತಯಾರಿಲ್ಲ. ಅಲ್ಲಿಗೆ ಹೋಗಿ ಬಂದ ರೈತರು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ, ಏನು ನಡೆಸುತ್ತಾರೆ, ಏನಾಗುತ್ತದೆನ್ನುವುದನ್ನು ನಾನಿಲ್ಲಿ ಪ್ರಸ್ತಾಪಿಸಿದರೆ, ನನನ್ನು ನಾನೇ ಅವಮಾನ ಮಾಡಿಕೊಂಡ ಹಾಗಾಗುತ್ತದೆ. ಅದಕ್ಕೆ ನಾನು ಸಿದ್ಧನಿಲ್ಲ.

ಅಧ್ಯಕ್ಷರು :— ಸೆಕೆಂಡ್ಸ್ ಪ್ರಾಬ್ಲಂ ಜಾಸ್ತಿ ಇರಬಹುದಲ್ಲವೇ?

ಶ್ರೀ ಸಿ. ಬೈರೇಗೌಡ :— ಏಕೆಂದರೆ, ನಾನೂ ಸಹ ಎಲ್ಲಾ ಜಿಲ್ಲೆಗಳಿಗೆ ಹೋಗಿ ಬಂದಿರುವವರಿಂದ ಮಾಹಿತಿಯನ್ನು ತರಿಸಿದ್ದೇನೆ. ಅದರ ವಿಚಾರವನ್ನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಾಗಿರುವ ಬಗ್ಗೆ ವಿವರವಾದ ವರದಿಯನ್ನು ತರಿಸಿ, ನಂತರ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :— ಹಶ್ಮಿಯವರೆ, ನಾಳೇ ಶೂನ್ಯವೇಳೆಯಲ್ಲಿ ಸಿಂಧ್ಯಾರವರಿಗೆ ಇರಲು ಹೇಳುತ್ತೇನೆ. ಈಗ ಅವರು ಕೌನ್ಸಿಲ್‌ನಲ್ಲಿದ್ದಾರೆ. ತಾವು ಪ್ರಸ್ತಾಪಿಸಬೇಕೆಂದಿರುವ ಟಿಪ್ಪು ಸುಲ್ತಾನ್ ವಿಚಾರವನ್ನು ನಾಳೆ ರೈಸ್ ಮಾಡಿ. ಸಾಮಾನ್ಯ ಜಾಹೀರಾತನ್ನು ಎಲ್ಲಾ ಪತ್ರಿಕೆಗಳಿಗೂ ನೀಡುತ್ತಿದ್ದು, ಈ ಸಲ ಉರ್ದು ಪತ್ರಿಕೆಗೆ ಕೊಟ್ಟಿಲ್ಲವೆನ್ನುತ್ತಿದ್ದಾರೆ. ನಾನೇ ಹೇಳಿದ್ದೇನೆ, ಅವರು ಉತ್ತರಿಸುತ್ತಾರೆ.

(ಐ) ಉರ್ದು ಪತ್ರಿಕೆಗೆ ಜಾಹೀರಾತು ನೀಡುವ ಬಗ್ಗೆ

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ:— ಪ್ರಶಸ್ತಿ ಪ್ರಧಾನದ ಬಗ್ಗೆ ಒಂದು ಜಾಹಿರಾತು ಬಂದಿದೆ. ಪ್ರತಿ ವರ್ಷವೂ ನಮ್ಮ ಬೀದರ್ ಜಿಲ್ಲೆಯಲ್ಲಿ ಯಾವ ಪೇಪರ್ ಮೀಡಿಯಾ ಲಿಸ್ಟ್‌ನಲ್ಲಿ ಬಂದಿರುತ್ತದೋ, ಉರ್ದುವಾಗಲಿ, ಕನ್ನಡವಾಗಲಿ, ಎಲ್ಲರಿಗೂ ಕೊಡುತ್ತಿದ್ದರು. ಈ ಸಲ ತಾವು ಒಂದು ನೋಟ್ ಹಾಕಿದ್ದೀರಿ. ಕೇವಲ ಕನ್ನಡ ಪತ್ರಿಕೆಗೆ ಮಾತ್ರ ಜಾಹೀರಾತು ಕೊಡಬೇಕೆಂದು ಹೇಳಿದ್ದೀರಿ. ಹಿಂದಿನ ವಾರ್ತಾ ಮತ್ತು ಪ್ರಚಾರ ಮಂತ್ರಿಗಳಾಗಿದ್ದಾಗ, ಈ ರೀತಿ ಆಗಿರಲಿಲ್ಲ. ಎಲ್ಲರಿಗೂ ಕೊಡುತ್ತಿದ್ದರು.